- -                    ಅಸಲು ದಾವೆ ಸಂ: **61/2024**        ಪಿ.ಡಬ್ಲ್ಯು-**2**

**ದಿ: 04-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ಬಿ.ಎಸ್.ಡಿ. ವಕೀಲರಿಂದ: -**

1. ನಾನು ವಿದ್ಯಾಭ್ಯಾಸ ಮಾಡಿಲ್ಲ ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಜಮೀನಿನ ಸರ್ವೆ ನಂಬರ್ 55 ಆಗಿರುತ್ತದೆ. ಅದು ಹೇಮನಾಳ ಸೀಮಾಂತರದಲ್ಲಿ ಬರುತ್ತದೆ. ಈ ದಾವೆಯನ್ನು ಬಾಬು ಇವರು ಇಮಾಮಅಲಿ ಇವರ ಮೇಲೆ ಸಲ್ಲಿಸಿರುತ್ತಾರೆ. ಪ್ರತಿವಾದಿಯ ಮೇಲೆ ಯಾವ ಕಾರಣಕ್ಕೆ ದಾವಾ ಸಲ್ಲಿಸಿದ್ದೀರಾ ನಿಮಗೆ ಮಾಹಿತಿ ಇದೆಯಾ ಎಂದರೆ ಇಲ್ಲ ಎನ್ನುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರ ಕನ್ನಡ ಭಾಷೆಯಲ್ಲಿ ಬರೆದಿರುತ್ತಾರೆ ಕನ್ನಡ ಭಾಷೆಯಲ್ಲಿ ಬರೆದಿರುವ ಸಾಕ್ಷಿ ಪ್ರಮಾಣ ಪತ್ರಕ್ಕೆ ಹೆಬ್ಬೆಟ್ಟು ಸಹಿ ಮಾಡಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನೇನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

2. ಪ್ರತಿವಾದಿಯ ಹೊಲವನ್ನು ನಾನು ನೋಡಿದ್ದೇನೆ. ಪ್ರತಿವಾದಿಯ ಹೊಲದ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ದಾವಾ ಹೊಲದ ಸರ್ವೆ ನಂಬರ್ 5 ಇರುತ್ತದೆ ಅದು ವಾದಿಯ ಹೆಸರಿನಲ್ಲಿರುತ್ತದೆ. ಆ ಹೊಲ 1-00 ಎಕರೆ ಇರುತ್ತದೆ. ಸರ್ವೆ ನಂಬರ್ 5 ರ ಹೊಲದ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಹೊಲವು ಮೊದಲು ಯಾರ ಹೆಸರಿನಲ್ಲಿತ್ತು ಮತ್ತು ಮುಂದೆ ಯಾರ ಯಾರ ಹೆಸರಿನಲ್ಲಿ ಆಗಿದೆ ಎಂದು ನನಗೆ ಮಾಹಿತಿ ಇಲ್ಲ. ಆ ಹೊಲದಲ್ಲಿ ಎಷ್ಟು ಹಿಸ್ಸಾಗಳು ಆಗಿವೆ ಮತ್ತು ಯಾವ ಯಾವ ವರ್ಷಗಳಲ್ಲಿ ಮ್ಯುಟೇಶನ್ ಆಗಿವೆ ಮತ್ತು ಎಷ್ಟು ಪೋಡಿಗಳು ಆಗಿವೆ ಎಂದು ನನಗೆ ಮಾಹಿತಿ ಇಲ್ಲ. ವಾದಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಬೇಕು ಎಂದು ಹೇಳಿರುವುದರಿಂದ ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ